ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 30॥ UDP/1263/2018-20 || R.NO.50495/91 ॥ ತಾರೀಕು : 27–08–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಇನ್ನೂ ನಿರೀಕ್ಷೆ ಫಲಿಸಲಿಲ್ಲ



ಕರಾವಳಿಯ ಪ್ರಭಾವಿ ಶಾಸಕರಾಗಿರುವ ಕುಂದಾಪುರ ಕ್ಷೇತ್ರದ ಹಾಲಾಡಿ ಶ್ರೀನಿವಾಸ ಶೆಟ್ಟಿಯವರಿಗೆ ಬಿ.ಎಸ್.ವೈ. ಸಂಪುಟದಲ್ಲಿ ಸಚಿವ ಸ್ಥಾನ ದೊರೆಯಬಹುದು ಎಂಬ ನಿರೀಕ್ಷೆ ಪ್ರಥಮ ಹಂತದಲ್ಲಿ ಫಲಕಾರಿಯಾಗದಿರುವುದು ಅವರ ಅಭಿಮಾನಿಗಳಿಗೆ ನಿರಾಶೆ ಉಂಟುಮಾಡಿದೆ.

ಕುಂದಾಪುರ ಕ್ಷೇತ್ರದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯವರಿಗೆ ಈ ಬಾರಿ ಸಚಿವ ಸ್ಥಾನ ಸಿಗಬಹುದು ಎಂಬ ನಿರೀಕ್ಷೆ ಇತ್ತಾದರೂ ಪ್ರಥಮ ಹಂತದ ಸಂಪುಟ ರಚನೆಯಲ್ಲಿ ಅದು ಫಲಿಸಲಿಲ್ಲ.

ಬಹಳಷ್ಟು ಮಾಧ್ಯಮಗಳು ಪ್ರಕಟಿಸಿದ ಸಂಭಾವ್ಯರ ಪಟ್ಟಿಯಲ್ಲಿ ಕುಂದಾಪುರ ಶಾಸಕರ ಹೆಸರು ಪ್ರಕಟವಾಗಿತ್ತು. ಆದರೆ ಕೆಲವು ದಿನ ತಡವಾಗಿ ನಡೆದ ಸಂಪುಟ ರಚನೆಯಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಯಾವ ವಿಧಾನಸಭಾ ಸದಸ್ಯರೂ ಸಚಿವರಾಗುವ ಅವಕಾಶ ಪಡೆಯದಿರುವುದು ಪ್ರಶ್ನಾರ್ಥಕ ಚಿಹ್ನೆಯಾಗಿ ಉಳಿಯಿತು. ಸಂಪುಟ ವಿಸ್ತರಣೆಯಲ್ಲಿ ಅವಕಾಶ ಲಭ್ಯವಾಗಬಹುದು ಎಂಬ ನಿರೀಕ್ಷೆ ಇನ್ನೂ ಇದೆ.

ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಅವರೇ ಅಭಿಪ್ರಾಯ ಪಡುವಂತೆ ಸಚಿವ ಸ್ಥಾನದ ಲಾಬಿ ನಡೆಸಿದವರಲ್ಲ. ಆದರೆ ಅವರ ಪರವಾಗಿ ಬಹಳಷ್ಟು ಜನ, ಪಕ್ಷ ನಾಯಕರಲ್ಲಿ ಅವರಿಗೆ ಸಚಿವ ಸ್ಥಾನದ ಅವಕಾಶ ಈ ಬಾರಿ ತಪ್ಪಿ ಹೋಗದಂತೆ ಗಮನಿಸಬೇಕು ಎಂದು ಒತ್ತಾಯಿಸಿದ್ದಾರೆಂದು ಹೇಳಲಾಗಿತ್ತು. ಮುಖ್ಯಮಂತ್ರಿ ಯಡಿಯೂರಪ್ಪನವರು., ಸಂಸದೆ ಶೋಭಾ ಕರಂದ್ಲಾಜೆಯವರು, ಹಾಲಾಡಿ ಶ್ರೀನಿವಾಸ ಶೆಟ್ಟಿಯವರಿಗೆ ಅವಕಾಶ ನೀಡಲು ಒಲವು ಹೊಂದಿದ್ದಾರೆ ಎನ್ನಲಾಗಿತ್ತು.

ಕುಂದಾಪುರದ ಸ್ಥಳೀಯ ಸಂಸ್ಥೆಗಳ ಚುನಾವಣೆ, ವಿಧಾನಸಭೆ, ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಹೆಚ್ಚು ಮತ ಚಲಾವಣೆಯಾಗಲು ಹಾಲಾಡಿ ಶ್ರೀನಿವಾಸ ಶೆಟ್ಟಿಯವರ ವ್ಯಕ್ತಿತ್ವದ ಪ್ರಭಾವ ಕಾರಣ ಎಂದು ಹಲವು ಸ್ಥಳೀಯ ನಾಯಕರು ಅಭಿಪ್ರಾಯ ಹೊಂದಿದ್ದು ನಮಗೆ ನಿರಾಶೆಯಾಗಿದೆ ಎಂದಿದ್ದಾರೆ.

ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಯಾವುದೇ ಅಸಮಾಧಾನದ ಅಥವಾ ವಿವಾದಾತ್ಮಕ ಹೇಳಿಕೆ ಮಾಧ್ಯಮಗಳ ಮುಂದೆ ನೀಡದೇ ತಣ್ಣನೆಯ ಪ್ರತಿಕ್ರಿಯೆ ನೀಡಿ ಘನತೆ ತೋರ್ಪಡಿಸಿದ್ದಾರೆ. ಯುವ ಬಂಟರ ಸಂಘ ಸೇರಿದಂತೆ ಕೆಲವು ಸಂಘಟನೆಗಳು ಕುಂದಾಪುರ ಶಾಸಕರ ಪರವಾಗಿ ಮುಖ್ಯಮಂತ್ರಿಯವರನ್ನು ಆಗ್ರಹಿಸಿದ್ದಾರೆ.

## ಮಳೆಗೆ ಬಿಡುವಿಲ್ಲ

ಆಗಸ್ಟ್ ತಿಂಗಳಲ್ಲಿ ಭರ್ಜರಿಯಾಗಿ ಸುರಿಯುತ್ತಿರುವ ಮಳೆ ಸ್ವಲ್ಪ ಕಡಿಮೆಯಾದರೂ ಬಿಡುವಿಲ್ಲದೇ ಬರುತ್ತಿದೆ. ಆಗಸ್ಟ್ 26ರಂದು ಕುಂದಾಪುರದಲ್ಲಿ 39 ಮಿಲಿಮೀಟರ್ ಮಳೆಯಾಗಿದ್ದು ಮುಂದಿನ ದಿನಗಳಲ್ಲೂ ಮಳೆ ಬರುವ ಬಗ್ಗೆ ಹವಾಮಾನ ತಜ್ಞರು ಸೂಚನೆ ನೀಡಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಸರಾಸರಿ 29 ಮಿ.ಮೀ ಮಳೆ 25 ರಂದು ಸುರಿದಿತ್ತು.




## ಮತ್ತೆ ಸಂಪುಟ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ

ಕರ್ನಾಟಕ ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಕೋಟ ಶ್ರೀನಿವಾಸ ಪೂಜಾರಿಯವರು, ಸರಕಾರ ಬದಲಾದ ನಂತರ ಬಿಎಸ್ ಯಡಿಯೂರಪ್ಪ ನೇತೃತ್ವದ ನೂತನ ಸರಕಾರದಲ್ಲಿ ಸಂಪುಟ ದರ್ಜೆ ಸಚಿವರಾಗಿ ಸೇವೆ ಸಲ್ಲಿಸಲು ಅವಕಾಶ ಪಡೆದಿದ್ದಾರೆ.

ತನ್ನ ಕ್ರಿಯಾಶೀಲತೆ, ಸಂಘಟನಾ ಚತುರತೆ ಹಾಗೂ ವಾಕ್ಚಟುತ್ವದಿಂದ ಪಕ್ಷದ ವಿಶ್ವಾಸಕ್ಕೆ ಪಾತ್ರರಾಗಿರುವ ಕೋಟ ಶ್ರೀನಿವಾಸ ಪೂಜಾರಿಯವರು ಕರಾವಳಿಯ ಜಿಲ್ಲೆಗಳಲ್ಲಿ ಸಚಿವರಾಗಿ ಆಯ್ಕೆಯಾದ ಒಬ್ಬನೇ ಧುರೀಣ ಎನ್ನುವುದೂ ವಿಶೇಷವಾಗಿದೆ.

ಈ ಹಿಂದೆ ಸಚಿವರಾಗಿ



ಕಾರ್ಯನಿರ್ವಹಿಸಿ ಅನುಭವ ಹೊಂದಿರುವ ಕೋಟ ಶ್ರೀನಿವಾಸ ಪೂಜಾರಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕನಾಗಿ ಸ್ಥಾನಮಾನ ಪಡೆದವರು. ಈಗ ದ.ಕ. ಉಡುಪಿ ಜಿಲ್ಲೆಯ ಪರ ಒಬ್ಬರೇ ಸಚಿವರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿ ಪಡೆದಿದ್ದಾರೆ.

ಬಿಎಸ್.ವೈ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೇಲೆ ಸಂಭಾವ್ಯರ ಪಟ್ಟಿಯಲ್ಲಿ ಎಲ್ಲಾ ಮಾಧ್ಯಮಗಳಲ್ಲೂ ಕಾಣಿಸಿಕೊಂಡಿದ್ದ ಇವರ ಹೆಸರು ಅಂತಿಮ ಪಟ್ಟಿಯಲ್ಲೂ ಉಳಿದು ಸಂಪುಟ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಸಚಿವ ಸ್ಥಾನ ನಿರೀಕ್ಷೆಯಲ್ಲಿದ್ದ ದ.ಕ. ಉಡುಪಿ ಜಿಲ್ಲೆಯ ಹಲವು ಶಾಸಕರ ಅಭಿಮಾನಿಗಳಿಗೆ ನಿರಾಶೆಯಾದರೂ ಕೋಟ ಶ್ರೀನಿವಾಸ ಪೂಜಾರಿಯವರ ಆಯ್ಕೆ ಯಾರೂ ಪ್ರಶ್ನಿಸದಿರುವುದು ಗಮನಾರ್ಹ. ಪಕ್ಷದ ಪರವಾಗಿ ಅವರ ಹೋರಾಟ ಅವರು ವಿಶ್ವಾಸಕ್ಕೆ ಪಾತ್ರರಾಗಲು ಕಾರಣ ಎನ್ನಲಾಗುತ್ತದೆ.

## ಶ್ರೀ ವಿನಾಯಕ ಚತುರ್ಥಿ ಸಂಭ್ರಮಕ್ಕೆ ಕರಾವಳಿಯಲ್ಲಿ ಸಿದ್ಧತೆ




ನಾಗರ ಪಂಚಮಿ , ಶ್ರೀ ಕೃಷ್ಣ ಜನ್ಮಾಷ್ಟಮಿ ಮುಂತಾದ ಧಾರ್ಮಿಕ ಹಬ್ಬಗಳು ಭಾರೀ ಮಳೆಯ ನಡುವೆಯೂ ನಡೆದು ಹೋಯಿತು. ಈಗ ಸೆಪ್ಟೆಂಬರ್ ತಿಂಗಳ ಮೊದಲ ವಾರ ಶ್ರೀ ಗಣೇಶ ಚತುರ್ಥಿ ಸಂಭ್ರಮಕ್ಕೆ ಸಕಲ ಸಿದ್ಧತೆಗಳು ನಡೆಯುತ್ತಿವೆ. ಮಳೆರಾಯ ಕೃಪೆ ತೋರಿದರೆ ಒಂದು ವಾರದ ಕಾಲ ಭಕ್ತಾಭಿಮಾನಿಗಳಿಗೆ ವಿಶೇಷ ಸಂಭ್ರಮ.



ಶ್ರೀಗಣೇಶ ಚತುರ್ಥಿ ಮಹೋತ್ಸವ ಸೆ.2 ರಂದು ಆರಂಭಗೊಳ್ಳಲಿದ್ದು ಈಗಾಗಲೇ ಕರಾವಳಿಯಲ್ಲಿ ಚೌತಿ ಹಬ್ಬ ಸಿದ್ಧತೆ ಆರಂಭಗೊಂಡಿದೆ.

ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನ ಕುಂಭಾಶಿಯಲ್ಲಿ ಸೆ.2 ರಂದು ಸೋಮವಾರ ಅಷ್ಟೋತ್ತರ ಸಹಸ್ರ ನಾಳೀಕೇರ ಗಣಯಾಗ ನಡೆಯಲಿದೆ. ಸೆ.1 ರಿಂದಲೇ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿದ್ದು ಭರತನಾಟ್ಯ, ಭಕ್ತಿಭಾವ ಸಂಗೀತ , ಯಕ್ಷಗಾನ ಎರಡು ದಿನಗಳ ಕಾಲ ನಡೆಯಲಿದೆ.

ಶ್ರೀ ಸಿದ್ಧಿವಿನಾಯಕ ದೇವಸ್ಥಾನ ಹಟ್ಟಿಯಂಗಡಿಯಲ್ಲಿ ಶ್ರೀ ಗಣೇಶ ಚತುರ್ಥಿ ಮಹೋತ್ಸವ ಹಾಗೂ ಅಷ್ಟೋತ್ತರ ಸಹಸ್ರ ನಾಳೀಕೇರ ಮಹಾಗಣಯಾಗ, ಶ್ರೀ ಸತ್ಯಗಣಪತಿ ವ್ರತ , ಲಕ್ಷ ದುರ್ವಾರ್ಚನೆ ಮತ್ತು ಸಿಂಧೂರಾರ್ಚನೆ ತಾ.2 ರಿಂದ 4ರ ತನಕ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಸ್ಯಾಕ್ಸೋಫೋನ್ ವಾದನ, ಭರತನಾಟ್ಯ, ಯಕ್ಷಗಾನ , ನಡೆಯಲಿದ್ದು ದಿನಾಂಕ 4 ರಂದು ಧಾರ್ಮಿಕ ಸಭೆ ಹಾಗೂ ಸನ್ಮಾನ ಸಮಾರಂಭ ನಡೆಯಲಿದೆ.

ಕುಂದಾಪುರ, ಬೈಂದೂರು ತಾಲ್ಲೂಕಿನ ಬಹುತೇಕ ದೇವಾಲಯಗಳಲ್ಲಿ ಶ್ರೀ ಗಣೇಶೋತ್ಸವ ನಡೆಯಲಿದ್ದು , ಹಲವು ಗ್ರಾಮಗಳಲ್ಲಿ ಸಾರ್ವಜನಿಕ ಗಣೇಶೋತ್ಸವ ಏರ್ಪಡಿಸಲಾಗುತ್ತಿದೆ. ಸೆ.6ರ ತನಕ ಕಾರ್ಯಕ್ರಮಗಳು ನಡೆಯಲಿವೆ.

## ಹಿರಿಯ ನಾಗರಿಕರಿಗೆ ಸುಂದರ ವಿಶ್ರಾಂತ ಕುಟೀರಗಳು



ನೆಮ್ಮದಿಯಿಂದ ಜೀವನ ನಡೆಸಲು ಬಯಸುವ ಹಿರಿಯ ನಾಗರಿಕರಿಗೆ ಸ್ವತಂತ್ರವಾಗಿ ವಾಸ ಮಾಡಲು ಯೋಗ್ಯವಾದ ಹಾಗೂ ಎಲ್ಲಾ ರೀತಿಯ ಸೌಲಭ್ಯವಿರುವ ಕುಟೀರಗಳು ಮೈಸೂರು ಜಿಲ್ಲೆಯ ಪ್ರಶಾಂತ ವಾತಾವರಣವಿರುವ ಕಬಿನಿ ಹಿನ್ನೀರಿನ ತಟದಲ್ಲಿ ಲಭ್ಯವಿರುತ್ತದೆ. ಆಸಕ್ತ ವ್ಯಕ್ತಿಗಳು : ವಿ.ದಿನೇಶ್ ಶೆಣೈ (ಮೊಬೈಲ್ ನಂ.9900299022/ 8152937697) ರವರನ್ನು ಸಂಪರ್ಕಿಸಬಹುದು. ಉತ್ತಮ ಊಟ, ಉಪಹಾರ ವ್ಯವಸ್ಥೆ ಉಚಿತ ವೈದ್ಯಕೀಯ ಸೌಲಭ್ಯ.
email : info@kabiniresorts.in